ಯುವವೇದಿಕೆ

# ಪುಸ್ತಕ ಪ್ರೇಮ

ವಿಜಯಕುಮಾರ,
*ವಿವೇಕಪ್ರಭ ವಿಭಾಗ*

**ತಾ**ರುಣ್ಯವೆಂಬುದು ಬದುಕಿನಲ್ಲಿ ಅನೇಕ ಆಸೆ ಕನಸುಗಳನ್ನು ಹೊತ್ತ ಒಂದು ಅವಸ್ಥೆ. ಆಗ ವ್ಯಕ್ತಿಯ ಮುಂದೆ ವಿಶಾಲವಾಗಿ ಚಾಚಿಕೊಂಡಿರುವ ಬದುಕಿನ ಹರವಿನ ಒಂದು ಮಿಂಚುನೋಟವನ್ನು ಪಡೆಯಬೇಕಾದರೆ, ಅವನು ಮೊರೆ ಹೋಗಬೇಕಾದುದು ಪುಸ್ತಕಗಳಿಗೆ. ಮನುಷ್ಯನಲ್ಲಿ ಜ್ಞಾನಕ್ಕಾಗಿ, ಮಾಹಿತಿಗಾಗಿ ಇರುವ ಹಂಬಲ ಎಷ್ಟು ಬಲವತ್ತರವಾದುದೆಂದರೆ ಪ್ರಾಚೀನ ಕಾಲದಲ್ಲಿ ನಮ್ಮ ಪೂರ್ವಜರು ಹಿಮರಾಶಿಯಿಂದ ಪ್ರತಿಫಲಿತವಾದ ಬೆಳಕಿನಲ್ಲಿ, ರಾತ್ರಿಯಲ್ಲಿ ಮಿಣುಕುಹುಳುಗಳ ಬೆಳಕಿನಲ್ಲಿ ಓದಿ ತಮ್ಮ ಜ್ಞಾನದಾಹವನ್ನು ತೀರಿಸಿಕೊಳ್ಳುತ್ತಿದ್ದರಂತೆ! ಕಾಲಕಾಲಕ್ಕೆ ಸಂಚಯಿತವಾದ ಅಗಾಧವಾದ ಜ್ಞಾನರಾಶಿ ನಮಗೆ ಲಭ್ಯವಾಗಿರುವುದು ನಮ್ಮ ಪೂರ್ವಜರು ತಮ್ಮ ಜ್ಞಾನದಾಹಕ್ಕಾಗಿ ಮಾಡಿದ ತ್ಯಾಗ ಮತ್ತು ಸಮರ್ಪಣೆಗಳಿಂದ.

ಜ್ಞಾನದಾಹದ ಆರಂಭಬಿಂದುವನ್ನು ನಾವು ಬಾಲ್ಯದಲ್ಲಿ ಕಂಡು ಬರುವ ಕೌತುಕ ದೃಷ್ಟಿಯಲ್ಲಿ ಕಾಣಬಹುದು. ಏಕೆ, ಏನು, ಹೇಗೆ ಎಂಬ ಕೊನೆಯಿಲ್ಲದ ಪ್ರಶ್ನೆಗಳು ಮನುಷ್ಯನಲ್ಲಿ ಅಂತಸ್ಥವಾಗಿರುವ ಜ್ಞಾನದಾಹದ ಕುರುಹು. ಜ್ಞಾನಕ್ಕಾಗಿ ಇರುವ ಈ ಹಂಬಲವನ್ನು ಬಾಲ್ಯದಿಂದಲೂ ಪೋಷಿಸಿಕೊಂಡು ಬರಬೇಕೇ ಹೊರತು ಎಂದಿಗೂ ಹತ್ತಿಕ್ಕಲು ಪ್ರಯತ್ನಿಸಬಾರದು. ವಿದ್ಯಾರ್ಥಿ ಜೀವನವಿರುವುದೇ ಈ ವಿದ್ಯಾದಾಹವನ್ನು ಮೈಗೂಡಿಸಿಕೊಳ್ಳಲು. ಪ್ರಾಮಾಣಿಕ ಪರಿಶ್ರಮದಿಂದ ಆರ್ಜಿಸಿದ ವಿದ್ಯೆ ಬಾಳಿನ ಬುತ್ತಿಯಾಗುವುದರಲ್ಲಿ ಸಂದೇಹವಿಲ್ಲ.

ವಿದ್ಯೆ ಎಂದರೆ ಹೊಟ್ಟೆಗೆ ಹಿಟ್ಟು ದೊರಕಿಸಿಕೊಳ್ಳಲು ಯಾರದೋ ಸಲಹೆಯಿಂದ ಅಥವಾ ಬಲಾತ್ಕಾರದಿಂದ ಅಥವಾ ಯಾರನ್ನೊ ಮೆಚ್ಚಿಸಲು ಕೆಲವು ಪಠ್ಯ ಪುಸ್ತಕಗಳನ್ನು ಉರುಹಚ್ಚುವುದು ಎಂಬ ಸಂಕುಚಿತ ಆದರೆ ಸಾಕಷ್ಟು ಪ್ರಚಲಿತವಿರುವ ಭಾವನೆ ಇಡೀ ಮಾನವ ಜನಾಂಗಕ್ಕೇ ಎಷ್ಟು ಹಾನಿಕರ ಎಂಬುದನ್ನು ಊಹಿಸಲೂ ಸಾಧ್ಯವಿಲ್ಲ. ಈ ಸಂಕುಚಿತ ಭಾವನೆ ಬೇರೂರಿದಷ್ಟೂ ವ್ಯಕ್ತಿ ಪ್ರತಿಭಾವಂತರ ಚಿಂತನೆಗಳಿಂದ ವಂಚಿತನಾಗುತ್ತಾನೆ. "ಕುಸುರು ಮಾಡಿರದ ಒಂದು ಹರಳು ಎಷ್ಟು ನಿಷ್ಪ್ರಯೋಜಕವೋ ಕಲಿಕೆಯ ಸಂಸ್ಕಾರವಿರದ ವ್ಯಕ್ತಿ ಅಷ್ಟೇ ಬುದ್ಧಿಹೀನ" ಎಂಬ ಇಂಗ್ಲಿಷ್ ನಾಣ್ಣುಡಿಯಿದೆ. ತನ್ ತ್ಸೆಷಿ ಎಂಬ ತತ್ತ್ವಜ್ಞಾನಿ ಹೇಳುತ್ತಾನೆ, "ಯಾವ ವ್ಯಕ್ತಿಗೆ ತನ್ನ ಪ್ರಾಚೀನ ಹಾಗೂ ಆಧುನಿಕ ಇತಿಹಾಸ ಗೊತ್ತಿಲ್ಲವೊ ಅವನು ಮನುಷ್ಯ ದೇಹದಿಂದ ಆವೃತವಾಗಿರುವ ಮೃಗವೇ ಸರಿ" ಎಂದು. ಭರ್ತೃಹರಿಯ, ವಿದ್ಯಾ ವಿಹೀನಃ ಪಶುಃ ಎಂಬ ಉದ್ಗಾರ ಇದೇ ಮಾತನ್ನು ಪುಷ್ಟೀಕರಿಸುತ್ತದೆ. ಪ್ರಾಣಿಗಳಿಗೆ ಅಂದಂದಿನ ಬದುಕು ಅಂದಂದಿಗೇ. ನಿನ್ನೆಯ ಅರಿವಿಲ್ಲ, ನಾಳಿನ ಕನಸಿಲ್ಲ. ಅವುಗಳ ಸಂವೇದನೆಗಳು ಬಹಳ ಸೀಮಿತವಾದವುಗಳು. ಮನುಷ್ಯ ಆ ರೀತಿ ಬದುಕಲು ಪ್ರಾರಂಭಿಸದರೆ ಅವನ ಬದುಕು ಎಷ್ಟು ಸಂಕುಚಿತಗೊಳ್ಳುತ್ತದೆಂದರೆ ಅವನ ಬಾಳಿನಲ್ಲಿರುವುದು ಬರೀ ಕತ್ತಲೆ. ನಿದ್ರೆಯಲ್ಲೇ ಮೈಮೇಲೆ ಎಚ್ಚರವಿಲ್ಲದೆ ನಡೆಸುವ ಬದುಕು ಅದು. ನಿದ್ರೆಯಿಂದ ಎಚ್ಚೆತ್ತವನಿಗೆ ಹೇಗೆ ಬೆಳಕು ಕಂಡು ಎಲ್ಲವೂ ಸ್ಪಷ್ಟವಾಗುತ್ತದೊ ಅಂತೆಯೇ ಮನಸ್ಸು ಬೌದ್ಧಿಕ ವೈಶಾಲ್ಯ ಹೊಂದಿದಾಗ ಆತನ ತಿಳಿವಳಿಕೆ ಸ್ಪಷ್ಟವಾಗುತ್ತದೆ. ನಮ್ಮ ಬಾಳನ್ನು ಬೆಳಗುವ ಜ್ಞಾನಕಿರಣಗಳು ಬರುವುದು ಸದ್ಗ್ರಂಥಗಳಿಂದ ಎಂಬುದನ್ನು ನಾವು ನೆನಪಿನಲ್ಲಿಡಬೇಕು. ಇತಿಹಾಸದಲ್ಲಿ ಹೆಸರು ಮಾಡಿರುವ ಅಕ್ಬರ್ ಚಕ್ರವರ್ತಿ ತಾನೇ ಪುಸ್ತಕಗಳನ್ನು ಓದದೇ ಇದ್ದರೂ ಪಂಡಿತರಿಂದ ಪುಸ್ತಕಗಳನ್ನು ಓದಿಸಿ ಅಪಾರ ಜ್ಞಾನವನ್ನು ಸಂಪಾದಿಸಿದ್ದ.

ಪುಸ್ತಕ ಓದಲು ಕಲಿತವನು ತನ್ನ ಬಾಳು ನಿಷ್ಪ್ರಯೋಜಕ ಎಂದೆಣಿಸಲು ಕಾರಣವಿಲ್ಲ. ಪುಸ್ತಕಪ್ರಪಂಚದಲ್ಲಿನ ಅಭಿಯಾನದಿಂದ ಅಲ್ಲಿ ಹುದುಗಿರುವ ಜ್ಞಾನ ಸಂಪತ್ತನ್ನು ಕಂಡು ನಿಬ್ಬೆರಗಾಗುತ್ತೇವೆ. ಜ್ಞಾನದ ಒಂದು ವೈಶಿಷ್ಟ್ಯವೆಂದರೆ ಹೆಚ್ಚು ತಿಳಿದಷ್ಟೂ ನಮ್ಮ ಈ ಅನ್ವೇಷಣೆಗೆ, ಅಭಿಯಾನಕ್ಕೆ ಕೊನೆ ಎಂಬುದಿಲ್ಲ ಎಂದರಿಯುತ್ತೇವೆ.

ಪುಸ್ತಕ ಕಣ್ಣಿಗೆ ಕಾಣುವಂತೆ ಒಂದು ನಿರ್ಜೀವ ವಸ್ತುವಲ್ಲ. ದಿವ್ಯ ಭಾವನೆಗಳಿಂದ ಕೂಡಿದ, ವಿಶ್ವದ ಸತ್ಯಸೌಂದರ್ಯದ ದರ್ಶನ ಮಾಡಿಸಬಲ್ಲ, ವಿಶಾಲ ಪ್ರಪಂಚದ ಜೀವನವನ್ನು ಪರಿಚಯ ಮಾಡಿಕೊಡುವ, ಕುಳಿತಲ್ಲಿಯೇ ದೇಶವಿದೇಶಗಳ ಜನಜೀವನ ದೃಶ್ಯಗಳ ಚಿತ್ರವನ್ನು ಕಣ್ಣಿಗೆ ಕಟ್ಟುವ ಒಂದು ಚಮತ್ಕಾರ ಪುಸ್ತಕದಲ್ಲಿದೆ. ಈ ಬದಿರಿನ ಆಕೃತಿಯ ಮಾನವ ದೇಹದ ಅಂತರಂಗದಲ್ಲಿನ ಹರ್ಷ, ಶೋಕ, ಕ್ರೌರ್ಯ ಕಾರುಣ್ಯ, ದೌರ್ಬಲ್ಯ, ಸಾಮರ್ಥ್ಯ, ಸಂದೇಹ, ಸಮಾಧಾನ ಮೊದಲಾದ ಭಾವತರಂಗಗಳನ್ನು ಚಿತ್ರಿಸಿ ಆ ಮೂಲಕ ಮಾನವ ಸ್ವಭಾವದ ಮನವರಿಕೆಯನ್ನು ಮಾಡಿಕೊಡುವ ಒಂದು

ಸಮರ್ಥ ಸಾಧನ ಈ ಪುಸ್ತಕ. ಮನಸ್ಸನ್ನು ಅರಳಿಸುವ, ಬುದ್ಧಿಯನ್ನು ಬೆಳಗಿಸುವ, ಹೃದಯವನ್ನು ಹಿಗ್ಗಿಸುವ ಸಾಮರ್ಥ್ಯ ಒಂದು ಸದ್ಗ್ರಂಥಕ್ಕೆ ಇದೆ, ಎಂಬ ಸತ್ಯ ಎಲ್ಲರ ಅನುಭವಕ್ಕೂ ದಕ್ಕು ವಂತಹದ್ದು. ಒಂದು ಸದ್ಗ್ರಂಥದಲ್ಲಿ ಒಂದು ಮಹಾಚೇತನದ ಜೀವನ ಹೋರಾಟಗಳಿರುತ್ತವೆ, ಗಾಢವಾದ ಚಿಂತನೆಗಳಿರುತ್ತವೆ, ಅನರ್ಘ್ಯ ವಾದ ಆತನ ಜೀವಸಾರ ಅಲ್ಲಿ ದಾಖಲೆಗೊಂಡಿರುತ್ತದೆ. ಕವಿ ಮಿಲ್ಟನ್ ಹೇಳುವಂತೆ ಅತ್ಯಮೂಲ್ಯವಾದ ತನ್ನ ಬಾಳ ನೆತ್ತರನ್ನೇ ಅದ್ಭುತ ಚೇತನವು ಒಂದು ಶ್ರೇಷ್ಠ ಕೃತಿಯಲ್ಲಿ ಹುದುಗಿಸಿಟ್ಟಿರುತ್ತದೆ. ಅವರ ಗಾಢವಾದ ಚಿಂತನೆಗಳಿಗೆ ಎಲ್ಲ ಸೀಮೆಯನ್ನು ದಾಟಿ, ನಾವು ಸೃಷ್ಟಿಸಿಕೊಂಡ ಕೃತಕವಾದ ಸಂಕುಚಿತ ಗೋಡೆಗಳನ್ನು ಹೊಡೆ ದುರುಳಿಸುವ ಸಾಮರ್ಥ್ಯವಿರುತ್ತದೆ. ಮಾನವನ ದುಃಖ ದುಮ್ಮಾನ, ಸುಖ ಸಂತೋಷ ಮುಂತಾದ ಭಾವಗಳಿಗೆ ಇಂತಹ ಮಹಾಚೇತನಗಳ ಪ್ರತಿಭೆಯಿಂದಾಗಿ ಮಾತು ಬಂದಿವೆ. ದುರ್ದಮ್ಯವಾದ ಕಷ್ಟಗಳನ್ನು ಮೆಟ್ಟಿ ಹರ್ಷದ ಹಾಡು ಹಾಡಿರುವುದನ್ನು ನಾವು ಶ್ರೇಷ್ಠ ಕೃತಿಗಳಲ್ಲಿ ಕಾಣಬಹುದು.

ವ್ಯಕ್ತಿಯ ಸಂಕುಚಿತ ಮನೋಭಾವ ಅವನನ್ನು ಭಯ ಗ್ರಸ್ತನನ್ನಾಗಿ ಮಾಡುತ್ತವೆ ಎಂದು ಮನಶ್ಶಾಸ್ತ್ರಜ್ಞರು ತಿಳಿಸುತ್ತಾರೆ. ವೈಚಾರಿಕತೆಯನ್ನು ಬೆಳೆಸಿಕೊಳ್ಳದವನು ತನ್ನ ಪರೀಕ್ಷೆಗೊಡ್ಡಲ್ಪಡದ ನಂಬಿಕೆಗಳನ್ನು ಅಭಿಪ್ರಾಯಗಳನ್ನು ಕಳೆದುಕೊಳ್ಳಲು ಸಿದ್ಧ ನಿರುವುದಿಲ್ಲ. ಆದರೆ ನಿಜವಾದ ಬೌದ್ಧಿಕ ಜೀವಿ ಯಾವ ಪ್ರಶ್ನೆ ಯನ್ನೂ ಎದುರಿಸಲು ಹೆದರುವುದಿಲ್ಲ. ತನ್ನ ಅಭಿಪ್ರಾಯಕ್ಕೆ ಕೊಡಲಿ ಪೆಟ್ಟು ಎನ್ನುವಂತಹ ಪ್ರಶ್ನೆಯನ್ನೂ ಆತ ಉತ್ತರಿಸಲು ಪ್ರಯತ್ನಿಸು ತ್ತಾನೆ. ತನ್ನ ಅನ್ವೇಷಣೆ ಎಲ್ಲಿಗೆ ಕರೆದೊಯ್ದರೆ ಅಲ್ಲಿಗೆ ತಲುಪುತ್ತಾನೆ. ಇದನ್ನೇ ಬೌದ್ಧಿಕ ಪ್ರಾಮಾಣಿಕತೆ ಎನ್ನುತ್ತಾರೆ. ಉದಾಹರಣೆಗೆ ಶ್ರೇಷ್ಠ ಚಿಂತನೆಗಳನ್ನೊಳಗೊಂಡ ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ ಯಲ್ಲಿ, ವ್ಯಕ್ತಿಯ ಬಾಳನ್ನು ಅನೇಕ ದೃಷ್ಟಿಗಳಿಂದ ಆಳವಾಗಿ ಒರೆ ಹಚ್ಚಿ ನೋಡಿರುವುದು ಅರಿವಾಗುತ್ತದೆ. ಅನಂತ ಕಾಲ, ವಿಶಾಲ ದೇಶಗಳ ಸಂದರ್ಭದಲ್ಲಿ, ವಿಶ್ವದ ಹಿನ್ನೆಲೆಯಲ್ಲಿ, ಹುಟ್ಟು ಸಾವುಗಳ ರಹಸ್ಯದ ಚೌಕಟ್ಟಿನಲ್ಲಿ, ವಿಜ್ಞಾನ-ಧರ್ಮ-ಇತಿಹಾಸಗಳ ಬೆಳಕಿನಲ್ಲಿ ಮನುಷ್ಯನ ಬಾಳನ್ನು ಪರೀಕ್ಷಿಸಿ ನೋಡಿರುವುದು ನಮಗೆ ಮನ ದಟ್ಟಾಗುತ್ತದೆ.

ಪುಸ್ತಕಗಳನ್ನು ಓದುವುದರಿಂದ ಉಂಟಾಗುವ ಆನಂದ ಅಸಾ ಧಾರಣವಾದುದು. ಉದಾಸವಾದ ಮನಸ್ಸನ್ನು ಶಾಂತಗೊಳಿಸುವ, ಚಿತ್ತಕ್ಷೋಭೆಯನ್ನು ದೂರಮಾಡುವ ಚಿತ್ತಶಾಮಕ ಶಕ್ತಿ ಪುಸ್ತಕ ಗಳಿಗಿದೆ. ಬೆಟ್ಟ ಗುಡ್ಡ ಕಾನನಗಳಿಂದ ಎಷ್ಟೋ ದೂರದಲ್ಲಿದ್ದರೂ ಅಲ್ಲಿರುವ ನಿರಾಕುಲತೆಯನ್ನು, ನೀರವತೆಯನ್ನು ಪುಸ್ತಕಗಳಲ್ಲಿ ತಲ್ಲೀನನಾಗಿ ಪಡೆಯಬಹುದು. ಪ್ರಪಂಚದ ಯಾವ ಸಂಪತ್ತೂ ಕೊಡಲಾಗದ ಆತ್ಮಸಂಪತ್ತನ್ನು ಕೊಡುವ ಶಕ್ತಿ ಪುಸ್ತಕಗಳಿಗಿದೆ. ಓದುವುದರಿಂದ ಸಿಗುವ ಆಹ್ಲಾದ, ಆನಂದಕ್ಕೆ ಸಾಟಿಯಾಗಿರುವುದು ಬೇರೊಂದಿಲ್ಲ. ಜ್ಞಾನರಾಶಿಯಲ್ಲಿನ ವೈವಿಧ್ಯ ಅಗಾಧವಾದುದು. ತತ್ತ್ವಶಾಸ್ತ್ರ, ಇತಿಹಾಸ, ವಿಜ್ಞಾನ, ಸಾಹಿತ್ಯ, ಧರ್ಮ, ಪ್ರವಾಸಕಥನ ಹೀಗೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಅವರವರ ಅಭಿರುಚಿಗೆ ತಕ್ಕಂತೆ ತಮ್ಮ ಜ್ಞಾನಕ್ಷೇತ್ರವನ್ನು ಆಯ್ದುಕೊಂಡು ಅರಿವಿನ ಮೇರೆಯನ್ನು ವಿಸ್ತರಿಸಿಕೊಳ್ಳಬಹುದು. ಆದರೆ ಓದುವ ಹವ್ಯಾಸ ವನ್ನಂತೂ ರೂಢಿಸಿಕೊಳ್ಳಬೇಕಾದುದು ವ್ಯಕ್ತಿತ್ವದ ಆರೋಗ್ಯಕರ ಬೆಳ ವಣಿಗೆಯ ಅವಿಭಾಜ್ಯ ಅಂಗ.

ಒಂದೆರಡು ದಶಕಗಳ ಹಿಂದಷ್ಟೇ ನಮ್ಮ ಮಕ್ಕಳು ಶಾಲೆಯಿಂದ ಬಂದು ಎನಿಡ್ ಬ್ಲೈಟನ್ ಬರೆದ ಸಾಹಸಮಯ ಕಥೆಗಳಲ್ಲಿ ತಲ್ಲೀನ ರಾಗುತ್ತಿದ್ದುದನ್ನು ಕಾಣಬಹುದಾಗಿತ್ತು. ಆ ಪುಸ್ತಕಗಳನ್ನು ಓದುವಾಗಿನ ಅವರ ಕೌತುಕತೆ ಉತ್ಸಾಹ ಸಾಂಕ್ರಾಮಿಕವಾಗಿತ್ತು. ಆದರೆ ಇಂದು ಅಕ್ಷರ ಮುದ್ರಣ, ಮತ್ತು ಪುಸ್ತಕಗಳ ಕಾಲ ಮುಗಿಯಿತೆ ಎಂಬ ಪ್ರಶ್ನೆ ನಮ್ಮನ್ನು ತಲ್ಲಣಗೊಳಿಸಬಹುದು. ಆದರೆ ನಾವು ಗಮನಿಸಬೇಕಾದ ಅಂಶವೆಂದರೆ ಕೇವಲ ಲಾಭದಾಯಕವಾದ, ವ್ಯಾಪಾರೀಕರಣದ, ಅರ್ಥಿಕಕೇಂದ್ರದ ಮೇಲೆ ನಿಂತಿರುವ ಇಂಟರ್ ನೆಟ್, ಕೇಬಲ್ ಮುಂತಾದ ಮಾಹಿತಿ ತಂತ್ರಜ್ಞಾನ ಸಲಕರಣೆಗಳು ಎಂದೂ ಮುದ್ರಣ ಮತ್ತು ಪುಸ್ತಕಗಳ ಕಾಲವನ್ನು ಮುಗಿಸಲಾರವು ಎಂಬುದು. ಪಾಶ್ಚಾತ್ಯರಲ್ಲಿಯೂ ಇಂಟರ್‌ನೆಟ್ ಮತ್ತು ಕೇಬಲ್‌ಗಳಿಗೆ ಮುದ್ರಣ ಮತ್ತು ಪುಸ್ತಕಗಳ ಕಾಲವನ್ನು ಮುಗಿಸಲು ಸಾಧ್ಯವಾಗಿಲ್ಲ. ಕಂಪ್ಯೂಟರ್ ಬಳಕೆಯಲ್ಲಿ ನಮಗಿಂತ ಮುಂದೆ ಇರುವ ಯೂರೋಪ್, ಅಮೇರಿಕಗಳಲ್ಲಿ ಮುದ್ರಣ ಮೂಲೆ ಗುಂಪಾಗಿಲ್ಲ. ಶೇಕ್ಸ್‌ಪಿಯರ್ ಹಳತು ಎನಿಸಿಲ್ಲ. ನಮ್ಮಲ್ಲಿ ಆ ಪ್ರಮಾಣದ ಕಂಪ್ಯೂಟರ್ ಬಳಕೆಯನ್ನು ಊಹಿಸುವುದೂ ಅಸಾಧ್ಯ. ಇದೇ ಆಧುನಿಕ ತಂತ್ರಜ್ಞಾನವನ್ನು ಮುದ್ರಣ ಮತ್ತು ಪುಸ್ತಕಗಳು ಬಳಸಿಕೊಂಡು ಹೊಸ ಸವಾಲುಗಳನ್ನು ಯಶಸ್ವಿಯಾಗಿ ಎದುರಿಸು ತ್ತಿರುವುದನ್ನೂ ನಾವಿಂದು ಕಾಣಬಹುದು.

ಈವತ್ತು ಎಲ್ಲೆಲ್ಲೂ ಲಭ್ಯವಿರುವ ಕೇಬಲ್-ಇಂಟರ್‌ನೆಟ್-ಕಂಪ್ಯೂಟರ್ – ಮೊಬೈಲ್ ಫೋನ್ ಎಲ್ಲವೂ ವ್ಯವಹಾರಕ್ಕೆ! ಆ ವ್ಯವಹಾರವೆಲ್ಲಾ ಮುಗಿದಮೇಲೆ ಒಂದು ಜೀವ ಈ ಎಲ್ಲ ಜಂಜಡ ದಿಂದ ಒಂದು ಕ್ಷಣಕಾಲ ಹೊರಗೆ ಬಂದು ಸಹಜವಾಗಿಯೇ ನೈಜ ದಲ್ಲೇ ನಿಂತು ಮನಶ್ಶಾಂತಿಯನ್ನೋ, ಆಹ್ಲಾದವನ್ನೋ, ಮರಳಿ ವ್ಯವಹಾರದಲ್ಲಿ ತೊಡಗಲು ಬೇಕಾದ ಮನೋಬಲವನ್ನೋ ಪಡೆಯ ಬೇಕಾಗುತ್ತದೆ. ಆಗ ಅವನು ಒಂದು ಧ್ಯಾನಾವಸ್ಥೆಗೆ ಒಯ್ಯಬಲ್ಲಂಥ ಎರಡು ಕವಚಗಳನ್ನು ಹೊದ್ದಿರುವ ಕಪ್ಪುಶಾಯಿಯಲ್ಲಿ ಮುದ್ರಿತ ವಾದ ಆ ಅಕ್ಷರ ರಾಶಿಗೆ ಶರಣಾಗಬೇಕಾಗುತ್ತದೆ. ಪುಸ್ತಕಗಳು ಇಂದಿಗೂ ತೇಜೋವರ್ಧಕಗಳಾಗಿವೆ ಎಂಬುದನ್ನು ಆಗ ಅವನು ಅರಿಯುತ್ತಾನೆ. ✡

ಕೆಲವು ಪುಸ್ತಕಗಳ ರುಚಿ ನೋಡಬೇಕು, ಮತ್ತೆ ಕೆಲವನ್ನು ನುಂಗಬೇಕು.
ಇನ್ನು ಕೆಲವೇ ಪುಸ್ತಕಗಳನ್ನು ಜಗಿದು ಜೀರ್ಣಿಸಿಕೊಳ್ಳಬೇಕು. –ಫ್ರಾನ್ಸಿಸ್ ಬೇಕನ್